# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

## ಸಿಸಿ: 890/2016

**ಪಿರ್ಯಾದುದಾರರು** : ಸಿದ್ದಪ್ಪಾಜಿ,
ಬಿನ್ ಲೇಟ್ ಸಿದ್ದೇಗೌಡ,
45 ವರ್ಷ,
ವಾಸಃ ಎ ಡಿವಿಸನ್,
ಎಲೆಕೇರಿ, ನಂ. 4274,
ದೇವರಹೊಸಹಳ್ಳಿ ರಸ್ತೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

-ವಿರುದ್ಧ-

**ಆರೋಪಿ** : ಸಿ. ಲಕ್ಷ್ಮಣ್ ಅಲಿಯಾಸ್ ಲಕ್ಷ್ಮಣ್ ಬಾಬು
ಬಿನ್ ಎಂ.ವಿ. ಚಂದ್ರೇಗೌಡ,
40 ವರ್ಷ,
ವಾಸಃ ನಂ. 1750,
ಎ ಡಿವಿಜನ್, ಮಂಗಳವಾರಪೇಟೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

### ದಂಡ ಪ್ರಕ್ರಿಯಾ ಸಂಹಿತೆ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ

1. ನೀವು ಫಿರ್ಯಾದುದಾರ ಪರ ಸಾಕ್ಷ್ಯ ನುಡಿದಿರುವುದನ್ನು ಕೇಳಿರುವಿರಾ?
ಉತ್ತರ ಃ

2. ಪ್ರಾಸಾ.1/ಶ್ರೀ ಸಿದ್ದಾಪ್ಪಾಜಿರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಆರೋಪಿಯಾದ ನೀವು ಹಾಗೂ ಫಿರ್ಯಾದುದಾರರು ಪರಿಚಯಸ್ಥರಾಗಿದ್ದು, ಈ ಪರಿಚಯದ ಮೇರೆಗೆ ಆರ್ಥಿಕ ತೊಂದರೆ ಹಾಗೂ ಮನೆ ನವೀಕರಣ ಮಾಡುವ ಸಲುವಾಗಿ ಫಿರ್ಯಾದುದಾರರಿಂದ

ರೂ.5,00,000/- ಗಳನ್ನು ಜನವರಿ 2016 ರಂದು ಸಾಲವಾಗಿ ಪಡೆದಿರುತ್ತೀರಿ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

3. ಪ್ರಾಸಾ.1 ರವರು ಮುಂದುವರೆದು ನುಡಿಯುವುದೇನೆಂದರೆ, ಆರೋಪಿಯಾದ ನೀವು ಫಿರ್ಯಾದಿದಾರರಿಗೆ ಸದರಿ ಸಾಲವನ್ನು ಆರು ತಿಂಗಳ ಒಳಗೆ ಮರುಪಾವತಿ ಮಾಡುತ್ತೇನೆಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

1. 4. ಪ್ರಾಸಾ.1 ರವರು ಮುಂದುವರೆದು ನುಡಿಯುವುದೇನೆಂದರೆ, ಪಿರ್ಯಾದುದಾರರು ಅವಧಿಯ ತರುವಾಯ ಫಿರ್ಯಾದಿದಾರರು ಹಣವನ್ನು ಕೇಳಿದಾಗ ಆರೋಪಿತರಾದ ನೀವು ಸದರಿ ಹಣದ ಮರುಪಾವತಿಗಾಗಿ ಚೆಕ್ ದಿನಾಂಕ **02.08.**2016 ಎಂದು ನಮೂದು ಮಾಡಿದ ರಾಮನಗರ ಶಾಖೆಯ ಕರೂರು ವೈಶ್ಯ ಬ್ಯಾಂಕ್ ನ ಸಂಖ್ಯೆಃ **244653** ರ ಚೆಕ್‌ನ್ನು ನೀಡಿ ನಗದೀಕರಿಸಿಕೊಳ್ಳುವಂತೆ ಹೇಳಿರುತ್ತೀರಿ, ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

5. ಪ್ರಾಸಾ.1 ರವರು ಮುಂದುವರೆದು ನುಡಿಯುವುದೇನೆಂದರೆ, ನಂತರ ಫಿರ್ಯಾದಿದಾರರು ಸದರಿ ಚೆಕ್ ನ್ನು ಅವರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ಕಾವೇರಿ ಬ್ಯಾಂಕ್ ಗೆ ದಿಃ 02.08.2016 ರಂದು

ಸಲ್ಲಿಸಿದಾಗ, ಬ್ಯಾಂಕಿನವರು ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂಬ ಷರಾದೊಂದಿಗೆ ದಿಃ 04.08.2016 ರಂದು ಚೆಕ್‌ನ್ನು ವಾಪಸ್ಸು ನೀಡಿರುತ್ತಾರೆ, ಈ ಕುರಿತು ಫಿರ್ಯಾದಿದಾರರು ನಿಮಗೆ ತಿಳಿಸಿದಾಗ ನೀವು ಯಾವುದೇ ಹಣವನ್ನು ಮರುಪಾವತಿಸಿರುವುದಿಲ್ಲ, ತದನಂತರ ದಿನಾಂಕಃ.18.08.2016 ರಂದು ಫಿರ್ಯಾದಿದಾರರು ನಿಮಗೆ ವಕೀಲರಿಂದ ಕಾನೂನು ತಿಳುವಳಿಕೆ ಪತ್ರವನ್ನು ತ್ವರಿತ ಅಂಚೆ ಮೂಲಕ ಕಳುಹಿಸಿದ್ದು , ಸದರಿ ನೋಟೀಸು ಜಾರಿಯಾಗಿದ್ದು ನೀವು ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ ಹಾಗೂ ಯಾವುದೇ ಹಣವನ್ನು ಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.138 ಎನ್.ಐ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

6. ನಿಮ್ಮ ಪರವಾಗಿ ಬೇರೆ ಏನಾದರೂ ಹೇಳುವುದು ಇದೆಯೋ?
ಉತ್ತರ ಃ

7. ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಇದೆಯೇ?
ಉತ್ತರ ಃ

(ಮೇಲಿನ ಆರೋಪಿತನ ಹೇಳಿಕೆಯನ್ನು ಓದಿ ಹೇಳಿ, ಆತನು ನೀಡಿದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು. ಅದು ನಿಜ ಮತ್ತು ಸರಿಯಾಗಿದೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕಃ 29.04.2023.

**ಅಪರ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ. ಚನ್ನಪಟ್ಟಣ.**